**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.437/2022

| | | | |
|---|---|---|---|
| **ಸಾಕ್ಷಿಯ ಹೆಸರು** | : | **ಮರೀಗೌಡ ಎಂ.ಆರ್.** | **PW**. 7 |
| **ತಂದೆಯ ಹೆಸರು** | : | **ರಾಮೇಗೌಡ** | **CW**.18 |
| **ವಯಸ್ಸು** | : | **72 ವರ್ಷಗಳು** | |
| **ಉದ್ಯೋಗ** | : | **ನಿವೃತ್ತ ಶಿಕ್ಷಕರು** | |
| **ವಾಸಸ್ಥಳ** | : | **ಕೆ.ಆರ್.ನಗರ** | |

ದಿನಾಂಕ 23.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ- ಸರ್ಕಾರಿ ಅಭಿಯೋಜಕರಿಂದಃ-**

ಮೃತ ಗೋಪಿಕೃಷ್ಣ ನನ್ನ ಸಹೋದರಿ ಮಗ. 1 ನೇ ಆರೋಪಿ ಮೃತ ಗೋಪಿಕೃಷ್ಣನ ಹೆಂಡತಿ. ಗೋಪಿಕೃಷ್ಣ ಆತ್ಮಹತ್ಯೆ ಮಾಡಿಕೊಳ್ಳುವ ಸಮಯದಲ್ಲಿ 1 ನೇ ಆರೋಪಿಯೊಂದಿಗೆ ಮಂಡ್ಯದ ಮರಿಗೌಡ ಬಡಾವಣೆಯಲ್ಲಿ ಒಂದು ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು.

ಗೋಪಿಕೃಷ್ಣ ಆತ್ಮಹತ್ಯೆ ಮಾಡಿಕೊಂಡ ಒಂದೂವರೆ ತಿಂಗಳ ನಂತರ ಪೋಲಿಸರು ನನ್ನನ್ನು ಮಂಡ್ಯದ ಗೋಪಿಕೃಷ್ಣ ನ ಮನೆ ಬಳಿ ಕರೆದುಕೊಂಡು ಹೋಗಿ ಪಂಚನಾಮೆ ಮಾಡಿದರು. ಸದರಿ ಪಂಚನಾಮೆಯನ್ನು ನೋಡುತಿದ್ದು ಅದನ್ನು ನಿಪಿ.9 ಎಂದು, ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಪೋಲಿಸರು ಫೋಟೋ ತೆಗೆದರು. ಅವುಗಳನ್ನು ಈಗ ನೋಡುತ್ತಿದ್ದು ನಿಪಿ.10 ಮತ್ತು 11 ಎಂದು ಗುರುತಿಸಲಾಯಿತು. 1 ನೇ ಆರೋಪಿ ಕಿರುಕುಳ ನೀಡಿದ್ದರಿಂದ ಗೋಪಿಕೃಷ್ಣ ಆತ್ಮಹತ್ಯೆ ಮಾಡಿಕೊಂಡ ಎಂದು ನನ್ನ ಸಹೋದರಿ

ದೂರು ನೀಡಿದ್ದರು. ಮೃತ ಗೋಪಿಕೃಷ್ಣ ಜೀವಂತವಾಗಿದ್ದಾಗ ಅವರ ಕುಟುಂಬದ ವಿಚಾರವನ್ನು ನನ್ನ ಬಳಿ ಹೇಳಿರಲಿಲ್ಲ.

**ಪಾಟೀಸವಾಲುಃ- ಆರೋಪಿ ಪರ ಶ್ರೀ ಇ.ಬಿ.ಆರ್. ವಕೀಲರಿಂದಃ-**

ಪಂಚನಾಮೆಗೆ ಬರಲು ಪೋಲಿಸರು ನನಗೆ ನೋಟಿಸ್ ನೀಡಿರಲಿಲ್ಲ ಎಂದರೆ ಸರಿ. ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ ಎಂದರೆ ಸರಿ. ನಾನು ಪಂಚನಾಮೆಗೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.